



ಮನೋಜ್ ಚೋಪ್ರಾ ಕೈಗಳಲ್ಲಿ ಟೆಲಿಫೋನ್ ಡೈರೆಕ್ಟರಿ ಹಾಗೂ ಕಾರಿನ ನಂಬರ್ ಪ್ಲೇಟ್ (ಬಲ ಚಿತ್ರ) ಚೂರುಚೂರು

# 'ಬ್ರೇಕ್' ಕೆ ಬಾದ್!

**145** ಕೆಜಿ ತೂಕದ, 6 ಅಡಿ 5 ಇಂಚು ಎತ್ತರದ ಈ ವ್ಯಕ್ತಿಗೆ ಕಂಡ ಕಂಡ ವಸ್ತುಗಳನ್ನೆಲ್ಲ ಮುರಿಯುವುದೆಂದರೆ ಬಲು ಇಷ್ಟ. ಅದೂ ನಮ್ಮಿಂದ, ನಿಮ್ಮಿಂದ ಮುರಿಯಲು ಸಾಧ್ಯವಾಗದಂತಹ ವಸ್ತುಗಳೇ. ಚಪಾತಿ ಬೇಯಿಸುವ ಉಕ್ಕಿನ ಕಾವಲಿ, ಕಾರಿನ ನಂಬರ್ ಪ್ಲೇಟ್, 3000 ಪುಟಗಳಷ್ಟು ದಪ್ಪದ ಟೆಲಿಫೋನ್ ಡೈರೆಕ್ಟರಿ... ಕ್ಷಣಾರ್ಧದಲ್ಲಿ ಚೂರುಚೂರು! ಈತ ಮನೋಜ್ ಚೋಪ್ರಾ. ಏಷ್ಯಾದ ಅತ್ಯಂತ ಬಲಿಷ್ಠ ವ್ಯಕ್ತಿ.

ಮಧ್ಯಪ್ರದೇಶದ ಮನೋಜ್‌ಗೆ ಅಗಾಧ ಶಕ್ತಿ. ಪವರ್ ಲಿಫ್ಟಿಂಗ್, ವೇಟ್ ಲಿಫ್ಟಿಂಗ್‌ನಲ್ಲಿ ರಾಜ್ಯವನ್ನು ಪ್ರತಿನಿಧಿಸುತ್ತಿದ್ದ ಈತ 'ವಿಶ್ವದ ಬಲಿಷ್ಠ ವ್ಯಕ್ತಿ' ಸ್ಪರ್ಧೆಯನ್ನು ಟೀವಿಯಲ್ಲಿ ವೀಕ್ಷಿಸುತ್ತಿದ್ದಾಗ ಭಾರತವನ್ನು ಪ್ರತಿನಿಧಿಸುವ ನಿರ್ಧಾರ ಮಾಡಿದರಂತೆ. 2004ರಲ್ಲಿ ಕೆನಡಾದಲ್ಲಿ ನಡೆದ ಈ ಸ್ಪರ್ಧೆಯಲ್ಲಿ 14ನೇ ಸ್ಥಾನಕ್ಕೆ ತೃಪ್ತಿ ಪಡಬೇಕಾಯಿತು. ಆದರೆ ಕಳೆದ ನಾಲ್ಕು ವರ್ಷಗಳಿಂದ 'ಏಷ್ಯಾದ ಅತ್ಯಂತ ಬಲಿಷ್ಠ ವ್ಯಕ್ತಿ' ಬಿರುದು ಇವರ ಮುಡಿಗೇರಿದೆ. 30 ಸೆಕೆಂಡ್‌ಗಳಲ್ಲೇ 3000 ಪುಟಗಳಷ್ಟಿರುವ 22 ಟೆಲಿಫೋನ್ ಡೈರೆಕ್ಟರಿಗಳನ್ನು ಕೈಗಳಲ್ಲೇ ಹರಿದು ಚೂರು ಮಾಡುತ್ತಾರೆ. ಉಕ್ಕಿನ ಕಾವಲಿ ಇವರ ಕೈಯಲ್ಲಿ ಪೇಪರ್ ಸುರುಳಿಯಂತೆ ಸುರುಳಿಯಾಗಿ ಬಿಡುತ್ತದೆ. ಅದರ ಹಿಡಿ ಒಂದೇ ಏಟಿನಲ್ಲಿ ತುಂಡಾಗಿ ಬಿಡುತ್ತದೆ. ಕಾರಿನ ನಂಬರ್ ಪ್ಲೇಟ್ ಅನ್ನು ಅಕ್ಷರಶಃ ಎರಡು ಭಾಗ ಮಾಡಿ ಬಿಸಾಡುತ್ತಾರೆ. ಕಾರನ್ನು ಮೇಲೆತ್ತಿ ಗರಗರ ತಿರುಗಿಸುವುದು ಅವರಿಗೆ ಬಹಳ ಇಷ್ಟವಂತೆ.

ಮನೋಜ್ ಡಬ್ಲುಡಬ್ಲುಎಫ್‌ನಲ್ಲಿ ಭಾಗವಹಿಸಿದ ಮೊದಲ ಭಾರತೀಯ. ಅವರ ಮಗ 17ರ ಹರೆಯದ ಅಶಿತೋಶ್ ಈಗಾಗಲೇ 150 ಪೌಂಡ್ ತೂಗುತ್ತಿದ್ದು ಬಿಸಿ ನೀರಿನ ಸೀಸೆಯನ್ನು ಬಾಯಲ್ಲೇ ಊದಿ ಬಲೂನ್ ಥರ ಮಾಡುತ್ತಾರೆ. ಈ ರೀತಿ ಮಾಡಲು 500 ಪೌಂಡ್ ಒತ್ತಡ ಹಾಕಬೇಕು. ಅಂದರೆ ಶ್ವಾಸಕೋಶವೂ ಶಕ್ತಿಯುತವಾಗಿರಬೇಕು.

ಮನೋಜ್ ಅವರ ಶಕ್ತಿ ಪ್ರದರ್ಶನ ನೋಡಬೇಕಾ? ಕಾರಿನ ನಂಬರ್ ಪ್ಲೇಟ್, ಚಪಾತಿ ತವಾ ಸಂಗ್ರಹಿಸಿಟ್ಟುಕೊಂಡು ಮುರಿಸಿಕೊಳ್ಳಲು ಸಿದ್ಧರಾಗಿ.

■ ಎಸ್ಸೆಚ್

ಬಲೂನಿನಂತಾದ ಬಿಸಿ ನೀರಿನ ಚೀಲ.. ಮನೋಜ್ ಪುತ್ರ ಅಶಿತೋಶ್ ಕರಾಮತ್ತು

